# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **1023** |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ ಎಲ್ ಅನಿಲ್ ಕುಮಾರ್ (ಸ್ಥಳಿಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 23-02-2024 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು; ಈ ಜಿಲ್ಲೆಯಲ್ಲಿ ಅಗತ್ಯವಿರುವಷ್ಟು ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆಯೇ; (ತಾಲ್ಲೂಕುವಾರು ಅವುಗಳ ವಿವರ ನೀಡುವುದು); | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕೋಲಾರ ಜಿಲ್ಲೆಯಲ್ಲಿ 59 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು 4727 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲಾಗಿರುತ್ತದೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 58 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು 5363 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲಾಗಿರುತ್ತದೆ. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ.<br>• ಕೋಲಾರ ಜಿಲ್ಲೆಯಿಂದ ಹೊಸ ವಿದ್ಯಾರ್ಥಿ ನಿಲಯಗಳ ಮಂಜೂರಾತಿ ಕೋರಿ ಯಾವುದೇ ಬೇಡಿಕೆ/ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.<br>• ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದಲ್ಲಿ 1 ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಹಾಗೂ 1 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ಮಂಜೂರಾತಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.<br>• ಶಿಡ್ಲಘಟ್ಟ ತಾಲ್ಲೂಕು ಕೇಂದ್ರದಲ್ಲಿ 1 ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಮಂಜೂರಾತಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| ಆ) | ಈ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಕೋರಿ ಕಳೆದ 3 ವರ್ಷಗಳಲ್ಲಿ ಸ್ವೀಕೃತವಾದ ಅರ್ಜಿಗಳೆಷ್ಟು; ಇದರಲ್ಲಿ ಆಯ್ಕೆಯಾದ ಅರ್ಜಿಗಳೆಷ್ಟು ಮತ್ತು ವಿದ್ಯಾರ್ಥಿನಿಲಯಕ್ಕೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; | ಕೋಲಾರ ಜಿಲ್ಲೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಾತಿ ಕೋರಿ ಕಳೆದ 3 ವರ್ಷಗಳಿಂದ ಸ್ವೀಕೃತವಾದ ಅರ್ಜಿಗಳು, ಆಯ್ಕೆಯಾದ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಲಯಕ್ಕೆ ದಾಖಲಾದ ವಿದ್ಯಾರ್ಥಿಗಳ ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಿದೆ. |

...2..

-*+

| | | |
|---|---|---|
| ಇ) | ಈ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವೆಷ್ಟು ಮತ್ತು ಖರ್ಚಾದ ಅನುದಾನವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು); | ಕೋಲಾರ ಜಿಲ್ಲೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗಾಗಿ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ಹಾಗೂ ಖರ್ಚಾದ ಅನುದಾನದ ತಾಲ್ಲೂಕುವಾರು ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |
| ಈ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಅಗತ್ಯವಿರುವಷ್ಟು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆಯೇ; ಇಲ್ಲವಾದಲ್ಲಿ ಇನ್ನೂ ಎಷ್ಟು ವಿದ್ಯಾರ್ಥಿನಿಲಯಗಳ ಅವಶ್ಯಕತೆಯಿದೆ; ಅವಶ್ಯಕವಿರುವ ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣವಾದ ಮಾಹಿತಿ ನೀಡುವುದು). | ಕೋಲಾರ ಜಿಲ್ಲೆಯಲ್ಲಿ 59 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು 4727 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲಾಗಿರುತ್ತದೆ. ಹೊಸ ವಿದ್ಯಾರ್ಥಿನಿಲಯ ಮಂಜೂರಾತಿ ಕೋರಿ ಜಿಲ್ಲೆಯಿಂದ ಯಾವುದೇ ಬೇಡಿಕೆ/ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.<br><br>ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 58 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು 5363 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>• ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದಲ್ಲಿ 1 ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಹಾಗೂ 1 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ಮಂಜೂರಾತಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.<br>• ಶಿಡ್ಲಘಟ್ಟ ತಾಲ್ಲೂಕು ಕೇಂದ್ರದಲ್ಲಿ 1 ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಮಂಜೂರಾತಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.<br><br>ಆದಾಗ್ಯೂ, ಹೊಸ ವಿದ್ಯಾರ್ಥಿನಿಲಯದ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಅನುದಾನದ ಲಭ್ಯತೆಯನ್ನು ಅವಲಂಭಿಸಿರುತ್ತದೆ. |

**ಸಂಖ್ಯೆ: ಹಿಂವಕ 187 ಬಿಎಂಎಸ್ 2024**

**(ಶಿವರಾಜ್ ಎಸ್ ತಂಗಡಗಿ )**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಮಾನ್ಯ ವಿಧಾನಪರಿಷತ್ತು ಸದಸ್ಯರಾದ ಎಂ.ಎಲ್.ಅನಿಲ್ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1023ಗೆ ಅನುಬಂಧ-1

### ಚಿಕ್ಕಬಳ್ಳಾಪುರ ಜಿಲ್ಲೆ

| ಕ್ರ. ಸಂ | ತಾಲ್ಲೂಕು | ವಿದ್ಯಾರ್ಥಿ ನಿಲಯಗಳ ವಿವರ | | | |
|---|---|---|---|---|---|
| | | ಮೆಟ್ರಿಕ್ ಪೂರ್ವ | ಮಂಜೂರಾತಿ ಸಂಖ್ಯೆ | ಮೆಟ್ರಿಕ್ ನಂತರ | ಮಂಜೂರಾತಿ ಸಂಖ್ಯೆ |
| 1 | ಚಿಕ್ಕಬಳ್ಳಾಪುರ | 1 | 35 | 7 | 944 |
| 2 | ಬಾಗೇಪಲ್ಲಿ | 6 | 305 | 8 | 1156 |
| 3 | ಗುಡಿಬಂಡೆ | 3 | 190 | 1 | 100 |
| 4 | ಚಿಂತಾಮಣಿ | 9 | 505 | 7 | 1051 |
| 5 | ಶಿಡ್ಲಘಟ್ಟ | 6 | 295 | 1 | 100 |
| 6 | ಗೌರಿಬಿದನೂರು | 6 | 295 | 3 | 387 |
| ಒಟ್ಟು | | **31** | **1625** | **27** | **3738** |

### ಕೋಲಾರ ಜಿಲ್ಲೆ

| ತಾಲ್ಲೂಕು | ವಿದ್ಯಾರ್ಥಿ ನಿಲಯಗಳ ವಿವರ | | | |
|---|---|---|---|---|
| | ಮೆಟ್ರಿಕ್ ಪೂರ್ವ | ಮಂಜೂರಾತಿ ಸಂಖ್ಯೆ | ಮೆಟ್ರಿಕ್ ನಂತರ | ಮಂಜೂರಾತಿ ಸಂಖ್ಯೆ |
| ಕೋಲಾರ | 3 | 145 | 15 | 1581 |
| ಮುಳಬಾಗಲು | 11 | 655 | 3 | 300 |
| ಬಂಗಾರಪೇಟೆ | 4 | 155 | 8 | 800 |
| ಶ್ರೀನಿವಾಸಪುರ | 6 | 346 | 3 | 300 |
| ಮಾಲೂರು | 2 | 65 | 4 | 400 |
| ಒಟ್ಟು | **26** | **1366** | **33** | **3381** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಮಾನ್ಯ ವಿಧಾನಪರಿಷತ್ತು ಸದಸ್ಯರಾದ ಎಂ.ಎಲ್.ಅನಿಲ್ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1023ಗೆ ಅನುಬಂಧ-2

| ಕ್ರ. ಸಂ | ಜಿಲ್ಲೆ | ಕಳೆದ ಮೂರು ವರ್ಷಗಳಲ್ಲಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ | | | ಕಳೆದ ಮೂರು ವರ್ಷಗಳಲ್ಲಿ ಆಯ್ಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು | | | ಕಳೆದ ಮೂರು ವರ್ಷಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|---|---|---|---|
| | | 2021-22 | 2022-23 | 2023-24 | 2021-22 | 2022-23 | 2023-24 | 2021-22 | 2022-23 | 2023-24 |
| 1 | ಚಿಕ್ಕಬಳ್ಳಾಪುರ | 4773 | 6373 | 7961 | 4457 | 4789 | 4887 | 4421 | 4740 | 4814 |
| 2 | ಕೋಲಾರ ಜಿಲ್ಲೆ | 4632 | 5008 | 6580 | 3347 | 4536 | 3648 | 3299 | 4487 | 3648 |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಮಾನ್ಯ ವಿಧಾನಪರಿಷತ್ತು ಸದಸ್ಯರಾದ ಎಂ.ಎಲ್.ಅನಿಲ್ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1023ಗೆ ಅನುಬಂಧ-3

ಚಿಕ್ಕಬಳ್ಳಾಪುರ ಜಿಲ್ಲೆ

| ಕ್ರ. ಸಂ | ತಾಲ್ಲೂಕು | ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ | | | ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ಖರ್ಚಾದ ಅನುದಾನ | | |
|---|---|---|---|---|---|---|---|
| | | 2021-22 | 2022-23 | 2023-24 | 2021-22 | 2022-23 | 2023-24 (ಜನವರಿ-2024ರ ಅಂತ್ಯಕ್ಕೆ) |
| 1 | ಚಿಕ್ಕಬಳ್ಳಾಪುರ | 222.7 | 223.75 | 276.29 | 222.69 | 223.74 | 228.71 |
| 2 | ಬಾಗೇಪಲ್ಲಿ | 393.91 | 247.92 | 315.48 | 392.96 | 247.52 | 277.48 |
| 3 | ಗುಡಿಬಂಡೆ | 37.1 | 39.4 | 49.64 | 37.1 | 39.4 | 26.29 |
| 4 | ಚಿಂತಾಮಣಿ | 233.75 | 330.14 | 336 | 233.74 | 330.14 | 245.58 |
| 5 | ಶಿಡ್ಲಘಟ್ಟ | 55 | 75.88 | 85.32 | 54.99 | 75.85 | 67.28 |
| 6 | ಗೌರಿಬಿದನೂರು | 146.74 | 140.78 | 152.48 | 146.74 | 140.78 | 152.48 |
| ಒಟ್ಟು | | **1089.2** | **1057.87** | **1215.21** | **1088.22** | **1057.43** | **997.82** |

ಕೋಲಾರ ಜಿಲ್ಲೆ

| ಕ್ರ. ಸಂ | ತಾಲ್ಲೂಕು | ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ | | | ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ಖರ್ಚಾದ ಅನುದಾನ | | |
|---|---|---|---|---|---|---|---|
| | | 2021-22 | 2022-23 | 2023-24 | 2021-22 | 2022-23 | 2023-24 (ಜನವರಿ-2024ರ ಅಂತ್ಯಕ್ಕೆ) |
| 1 | ಕೋಲಾರ | 1031.2 | 740.25 | 905.64 | 896.71 | 740.25 | 695.79 |
| 2 | ಮುಳಬಾಗಲು | 275.89 | 370.52 | 379.09 | 247.57 | 368.43 | 275.43 |
| 3 | ಬಂಗಾರಪೇಟೆ | 225 | 275.45 | 353.12 | 204.21 | 269.86 | 283.42 |
| 4 | ಶ್ರೀನಿವಾಸಪುರ | 207.59 | 251.85 | 295.67 | 195.28 | 248.89 | 218.59 |
| 5 | ಮಾಲೂರು | 140.32 | 161.48 | 185.93 | 118.29 | 159.33 | 152.65 |
| ಒಟ್ಟು | | **1880.04** | **1799.55** | **2119.45** | **1662.06** | **1786.76** | **1625.88** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.